# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 659
ಮಾನ್ಯ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 19/09/2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ತಾಲ್ಲೂಕು ವ್ಯಾಪ್ತಿಗೆ ಬರುವ ಶಿಕಾರಗ ಮತ್ತು ಕರೇಜ್ (ಸುರಂಗಬಾವಿ) ಪುನಶ್ಚೇತನಕ್ಕಾಗಿ ಹಾಗೂ ಉದ್ಯಾನವನ ಅಭಿವೃದ್ಧಿಗಾಗಿ ಪ್ರವಾಸಿ ತಾಣವಾಗಿ ನಿರ್ಮಾಣ ಮಾಡಲು ಸರ್ಕಾರ 2.70 ಕೋಟಿ ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಪ್ರಇ/176/ಪ್ರವಾಯೋ/2017, ದಿನಾಂಕ:29-05-2017ರಲ್ಲಿ ಬೀದರ್ ನಗರದ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಕರೇಜ್‌ದಲ್ಲಿ ಹೂಳು ತೆಗೆಯುವುದು, ಸುತ್ತುಗೋಡೆ, ನೀರು ಶುದ್ಧೀಕರಣ ಕಿಂಡಿಗಳ ಸಂರಕ್ಷಣೆ, ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಹಾಗೂ ಉದ್ಯಾನವನ ಕಾಮಗಾರಿಯನ್ನು ರೂ.270.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಪರಿಷ್ಕೃತ ಅನುಮೋದನೆಯನ್ನು ನೀಡಲಾಗಿರುತ್ತದೆ. |
| ಆ) | ಇದಕ್ಕಾಗಿ ಲೋಕೋಪಯೋಗಿಯವರು ಕಠಿಣ ನಿಯಮವನ್ನು ರೂಪಿಸಿ ಎರಡು ಸಲ ಟೆಂಡರ್ ಕರೆದಿದ್ದರೂ ಸಹ ಅದಕ್ಕೆ ಯಾವ ಗುತ್ತಿಗೆದಾರನು ಮುಂದೆ ಬಂದಿಲ್ಲದ ಕಾರಣ ಸರ್ಕಾರ ನಿಯಮವನ್ನು ಸಡಿಲಗೊಳಿಸುವುದೇ; | ಸದರಿ ಕಾಮಗಾರಿಗೆ ಕಾರ್ಯಪಾಲಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ಬೀದರ್‌ರವರು ಕೆ.ಟಿ.ಟಿ.ಪಿ. ಕಾಯ್ದೆ ಪ್ರಕಾರ ಎರಡು ಬಾರಿ ಟೆಂಡರ್ ಕರೆದಿರುತ್ತಾರೆ. ಆದರೆ, ಸದರಿ ಟೆಂಡರ್‌ನಲ್ಲಿ ಅರ್ಹ ಗುತ್ತಿಗೆದಾರರು ಭಾಗವಹಿಸಿರುವುದಿಲ್ಲವೆಂದು ಕಾರ್ಯಪಾಲಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ಬೀದರ್‌ರವರು ತಿಳಿಸಿರುತ್ತಾರೆ. |
| ಇ) | ಈ ಕಾಮಗಾರಿಗಳಿಗೆ ಗುತ್ತಿಗೆದಾರರು ಮುಂದೆ ಬರದ ಕಾರಣ ಆ ಕಾಮಗಾರಿಯನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಸದರಿ ಕಾಮಗಾರಿಯನ್ನು ಪ್ರಾರಂಭಿಸದೇ ಇರುವುದರಿಂದ ಸರ್ಕಾರದ ಆದೇಶ ಸಂಖ್ಯೆ:ಪ್ರಇ/147/ಪ್ರವಾಯೋ/2019, ದಿನಾಂಕ:20.07.2019ರಂದು ಸದರಿ ಕಾಮಗಾರಿಯನ್ನು ರದ್ದುಪಡಿಸಿ ಆದೇಶಿಸಲಾಗಿದೆ. |
| ಈ) | ಬಂದಿದ್ದಲ್ಲಿ, ಬಿಡುಗಡೆ ಮಾಡಿದಂತಹ ಹಣ ಎಲ್ಲಿದೆ; ಕಾಮಗಾರಿಯನ್ನು ಪುನಃ ಪ್ರಾರಂಭಿಸುವ ಯೋಚನೆ ಏನಾದರೂ ಸರ್ಕಾರದ ಮುಂದಿದೆಯೇ: | ಸದರಿ ಕಾಮಗಾರಿಗೆ ಮೊದಲ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿದ್ದು, ಸದರಿ ಅನುದಾನವು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ ಇವರ ಖಾತೆಯಲ್ಲಿದೆ.<br><br>ಬೀದರ್ ನಗರದ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಕರೇಜ್‌ನಲ್ಲಿ ಹೂಳು ತೆಗೆಯುವುದು, ಸುತ್ತುಗೋಡೆ, ನೀರು ಶುದ್ಧೀಕರಣ, ಕಿಂಡಿಗಳ ಸಂರಕ್ಷಣೆ, ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಹಾಗೂ ಉದ್ಯಾನವನ ಹಾಗೂ ಶಿಕಾರಗದಲ್ಲಿ ಸುತ್ತುಗೋಡೆ ನಿರ್ಮಾಣ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜುವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ಮೂಲಕ ಅನುಷ್ಠಾನಗೊಳಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಟಿಒಆರ್ 265 ಟಿಡಿವಿ 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಹಾಗೂ ಪರಿಸರ ಸಚಿವರು